# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 74 |
| ಸದಸ್ಯರ ಹೆಸರು | : | ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 04-12-2023 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

****

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ವಾರ್ಷಿಕವಾಗಿ ಇಂಧನ ಇಲಾಖೆಯಿಂದ ಮತ್ತು ಸಾರ್ವಜನಿಕ ವಲಯದ ಖಾಸಗಿಯವರಿಂದ ಒಟ್ಟು ಎಷ್ಟು ಪ್ರಮಾಣದ ವಿದ್ಯುತ್ ಉತ್ಪಾದಿಸಲಾಗುತ್ತದೆ; (ಜಿಲ್ಲಾವಾರು ಯೋಜನೆವಾರು ವಿವರ ನೀಡುವುದು); | ರಾಜ್ಯದಲ್ಲಿ 2022-23 ನೇ ವರ್ಷದಲ್ಲಿ ಹಾಗೂ 2023-24 (ಏಪ್ರಿಲ್-23 ರಿಂದ ಸೆಪ್ಟೆಂಬರ್-23ರ ಅಂತ್ಯದವರೆಗೆ) ಒಟ್ಟು ಉತ್ಪಾದನೆಯಾದ ಸರ್ಕಾರಿ ಮತ್ತು ಖಾಸಗಿ ವಿದ್ಯುತ್ ಪ್ರಮಾಣದ ಜಿಲ್ಲಾವಾರು ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ. |
| ಆ) | ರಾಜ್ಯದಲ್ಲಿ ಅಕಾಲಿಕ ಮಳೆಯಿಂದ ಕೃಷಿಕರ ಬೆಳೆಗಳು ಹಾಳಾಗದಂತೆ ತಡೆಗಟ್ಟಲು ಸರ್ಕಾರ ಇಂಧನ ಇಲಾಖೆಗೆ ನಿರ್ದೇಶಿಸಿರುವ ಲೋಡ್ ಶೆಡ್ಡಿಂಗ್ ನ ವೇಳಾಪಟ್ಟಿಯ ವಿವರ ನೀಡುವುದು; ಇದು ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಿಗೆ ಒಂದೇ ತರಹದ ವೇಳಾಪಟ್ಟಿ ಅನ್ವಯಿಸುತ್ತಿದೆಯೇ; ಅಥವಾ ವ್ಯತ್ಯಾಸ ಹೊಂದಿದೆಯೇ; ಕಾರಣ ಸಮೇತ ಜಿಲ್ಲಾವಾರು ವಿವರ ನೀಡುವುದು; | ರಾಜ್ಯದ ನೀರಾವರಿ ಪಂಪ್‌ಸೆಟ್‌ಗಳಿಗೆ ಘೋಷಿತ ಅವಧಿಯನ್ವಯ ದಿನವಹಿ 7 ಗಂಟೆಗಳ ಕಾಲ 3-ಫೇಸ್ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ.<br>ಅನಿವಾರ್ಯ ಸಂದರ್ಭಗಳಲ್ಲಿ ವಿದ್ಯುತ್ ಲಭ್ಯತೆ /ಉತ್ಪಾದನೆ ಕುಂಠಿತವಾದಾಗ ಅಥವಾ ವಿದ್ಯುತ್ ಜಾಲದಲ್ಲಿ ಅಡಚಣೆ ಉಂಟಾದಾಗ ಮಾತ್ರ ತಾತ್ಕಾಲಿಕವಾಗಿ ವಿದ್ಯುತ್ ಜಾಲದ ಸುರಕ್ಷತಾ ದೃಷ್ಟಿಯಿಂದ ಅಲ್ಪ ಪ್ರಮಾಣದಲ್ಲಿ ವಿದ್ಯುತ್ ಕಡಿತ ಮಾಡಲಾಗುತ್ತದೆ.<br>ಸರ್ಕಾರದ ಸುತ್ತೋಲೆ ಸಂಖ್ಯೆ: ಎನರ್ಜಿ/ವಿಎಸ್‌ಸಿ/283/ 2023 ದಿನಾಂಕ: 16-10-2023 ರಂತೆ ವಿದ್ಯುತ್ ಲಭ್ಯತೆಯ ಅನುಗುಣವಾಗಿ ಕೃಷಿ ಸ್ಥಾವರಗಳಿಗೆ 3 ಫೇಸ್ ವಿದ್ಯುತ್ ಸರಬರಾಜು 5 ಗಂಟೆಗಳ ವಿದ್ಯುತ್ತನ್ನು ಹಗಲು ಮತ್ತು ರಾತ್ರಿ ಬ್ಯಾಚ್‌ಗಳಲ್ಲಿ 3 ಫೇಸ್ ವಿದ್ಯುತ್ ಸರಬರಾಜು ಮಾಡಲಾಗಿರುತ್ತದೆ.<br>ದಿನಾಂಕ 07.11.2023 ರಿಂದ ರಾಜ್ಯದ ಎಲ್ಲಾ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಸರ್ಕಾರದ ಆದೇಶದಂತೆ ಪ್ರತಿ ದಿನ 7 ಗಂಟೆಗಳ ಕಾಲ 3 ಫೇಸ್ ವಿದ್ಯುತ್‌ನ್ನು ಸರಬರಾಜು ಮಾಡಲಾಗುತ್ತಿದೆ. |
| ಇ) | ರಾಜ್ಯದಲ್ಲಿ ಇಂಧನ ಇಲಾಖೆಯಿಂದ ಸಾರ್ವಜನಿಕರಿಗೆ ಮತ್ತು ಕೃಷಿಕರಿಗೆ ಉಚಿತ ವಿದ್ಯುತ್ ನೀಡುವ ಯೂನಿಟ್ ಗಳ (ಮಾಸಿಕವಾಗಿ, ವಾರ್ಷಿಕವಾಗಿ ವ್ಯಯಿಸುವ) ಸಂಖ್ಯೆ ಎಷ್ಟು; ಉಚಿತ ಯೂನಿಟ್ ವಿದ್ಯುತ್ ಪಡೆಯಲು ಸಾರ್ವಜನಿಕರು ಮತ್ತು ಕೃಷಿಕರಿಗೆ ಇರುವ ಸರ್ಕಾರದ ಮಾನದಂಡವೇನು; ಜಿಲ್ಲಾವಾರು ವಿವರ ನೀಡುವುದು; | ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಸಾರ್ವಜನಿಕರಿಗೆ ಮತ್ತು ಕೃಷಿಕರಿಗೆ ಉಚಿತ ವಿದ್ಯುತ್ ನೀಡುವ ಯೂನಿಟ್‌ಗಳ ಜಿಲ್ಲಾವಾರು ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಿದೆ.<br>**<u>ಸಾರ್ವಜನಿಕರಿಗೆ (ಗೃಹ ಬಳಕೆ)ಈ ಕೆಳಕಂಡಂತೆ ಮಾನದಂಡಗಳು ಅನ್ವಯಿಸುತ್ತದೆ</u>**<br>ಗೃಹ ಯೋಜನೆಯಡಿ ರಾಜ್ಯದಲ್ಲಿ ಪ್ರತಿ ಮನೆಗೆ ಪ್ರತಿ ತಿಂಗಳಿಗೆ ಗರಿಷ್ಟ 200 ಯುನಿಟ್ ಗಳವರೆಗಿನ ಬಳಕೆಯ ಮಿತಿಯಲ್ಲಿ ಪ್ರತಿ ಗ್ರಾಹಕರು ಮಾಸಿಕ ಸರಾಸರಿ ಬಳಕೆಯ (ಆರ್ಥಿಕ ವರ್ಷ 2022-23ರ ಬಳಕೆಯ ಆಧಾರದನ್ವಯ) ಯುನಿಟ್‌ಗಳ ಮೇಲೆ ಶೇ 10 ರಷ್ಟು ಹೆಚ್ಚಿನ ಬಳಕೆಯ ಮಿತಿಯನ್ನು ಅನುಮತಿಸಿ ಅದಕ್ಕನುಗುಣವಾಗಿ ವಿದ್ಯುತ್ |

ಬಿಲ್ಲಿನ ಮೊತ್ತವನ್ನು ಉಚಿತವಾಗಿ ಒದಗಿಸಲು ಹಾಗೂ 200 ಯುನಿಟ್‌ಗಳ ಬಳಕೆಯನ್ನು ಮೀರಿದ ಗ್ರಾಹಕರು ಪೂರ್ಣ ವಿದ್ಯುತ್ ಬಿಲ್ಲನ್ನು ಪಾವತಿಸಲು ಸರ್ಕಾರವು ಅನುಮೋದನೆಯನ್ನು ನೀಡಿದೆ.

ಈ ಯೋಜನೆಯನ್ನು ಜುಲೈ-2023 ರ ತಿಂಗಳ ವಿದ್ಯುತ್ ಬಳಕೆಗೆ ಅನ್ವಯವಾಗುವಂತೆ ಈ ಕೆಳಕಂಡಂತೆ ಮಾನದಂಡಗಳಿವೆ.

- ಈ ಯೋಜನೆಯು ಗೃಹ ಬಳಕೆಯ ವಿದ್ಯುತ್ ಸಂಪರ್ಕಗಳಿಗೆ ಮಾತ್ರ ಅನ್ವಯವಾಗುತ್ತದೆ: ವಾಣಿಜ್ಯ ಉದ್ದೇಶಗಳಿಗೆ ವಿದ್ಯುತ್ ಉಪಯೋಗಿಸಿದಲ್ಲಿ ಅನ್ವಯವಾಗುವುದಿಲ್ಲ.

- ಪ್ರತಿ ತಿಂಗಳ ಮೀಟರ್ ರೀಡಿಂಗ್ ಮಾಡಿದಾಗ, ಒಟ್ಟು ವಿದ್ಯುತ್ ಬಳಕೆಯ ಪ್ರಮಾಣಕ್ಕೆ ಬಿಲ್ಲನ್ನು ನಮೂದಿಸುವುದು.
- ಗೃಹ ವಿದ್ಯುತ್ ಬಳಕೆದಾರನ ಅರ್ಹ ಮೊತ್ತವನ್ನು ಬಿಲ್‌ನಲ್ಲಿ ಕಡಿತಗೊಳಿಸಿ, ಉಳಿದ ಮೊತ್ತವನ್ನು ಗ್ರಾಹಕರಿಗೆ net bill ನೀಡುವುದು ಹಾಗೂ ಗ್ರಾಹಕರು net bill ನ್ನು ಪಾವತಿಸುವುದು.
- ಅರ್ಹ ಯುನಿಟ್/ಮೊತ್ತಕ್ಕಿಂತ ಒಳಗೆ ಬಿಲ್ ಆಗಿದ್ದಲ್ಲಿ ಅಂತಹ ಗ್ರಾಹಕರಿಗೆ ಶೂನ್ಯ ಬಿಲ್ಲನ್ನು ನೀಡಲಾಗುವುದು.
- ಈ ಯೋಜನೆಯಡಿ ಸೌಲಭ್ಯ ಪಡೆಯಲು ಇಚ್ಛಿಸುವ ಗ್ರಾಹಕರು ಸೇವಾ ಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸುವುದು
- ಪ್ರತಿ ಫಲಾನುಭವಿಯು ತನ್ನ Customer ID/Account ID ಅನ್ನು ಆಧಾರ್‌ಗೆ ಕಡ್ಡಾಯವಾಗಿ ಜೋಡಣೆ ಮಾಡುವುದು
- ಪ್ರಸ್ತುತ ಚಾಲ್ತಿಯಲ್ಲಿರುವ ಭಾಗ್ಯಜ್ಯೋತಿ/ಕುಟೀರ ಜ್ಯೋತಿ ಯೋಜನೆ ಮತ್ತು ಅಮೃತ ಜ್ಯೋತಿ ಯೋಜನೆಯ ಫಲಾನುಭವಿ ಗ್ರಾಹಕರುಗಳನ್ನು ಗೃಹ ಜ್ಯೋತಿ ಯೋಜನೆಯಡಿಯಲ್ಲಿ ಸೇರ್ಪಡಿಸುವುದು.
- ದಿನಾಂಕ: 30.06.2023 ರ ಅಂತ್ಯಕ್ಕೆ (ಜೂನ್ 2023 ರ ಮಾಹೆಯಲ್ಲಿ ಬಳಸಿದ ವಿದ್ಯುತ್ ಪ್ರಮಾಣಕ್ಕೆ ಜುಲೈ 2023 ರಲ್ಲಿ ವಿತರಿಸಿದ ಬಿಲ್ಲಿನ ಮೊತ್ತ ಒಳಗೊಂಡಂತೆ) ಬಾಕಿ ಇರುವ ವಿದ್ಯುತ್ ಶುಲ್ಕದ ಬಾಕಿ ಮೊತ್ತವನ್ನು 3 ತಿಂಗಳೊಳಗೆ ಪಾವತಿಸತಕ್ಕದ್ದು, ಬಾಕಿ ಮೊತ್ತವನ್ನು ನಿಗದಿತ ಅವಧಿಯೊಳಗೆ ಪಾವತಿಸದಿದ್ದಲ್ಲಿ ಅಂತಹ ಗ್ರಾಹಕರ ವಿದ್ಯುತ್ ಸ್ಥಾವರಗಳ ಸಂಪರ್ಕವನ್ನು ಕಡಿತಗೊಳಿಸಲಾಗುವುದು.
- ಗೃಹ ವಿದ್ಯುತ್ ಗ್ರಾಹಕರ ಸ್ಥಾವರಗಳಿಗೆ ಮಾಪಕವನ್ನು ಅಳವಡಿಸುವುದು ಹಾಗೂ ಮಾಪಕ ಓದುವುದು ಕಡ್ಡಾಯವಾಗಿರುತ್ತದೆ.

ಗೃಹ ವಿದ್ಯುತ್ ಬಳಕೆದಾರರ ಹೆಸರಿನಲ್ಲಿ ಒಂದಕ್ಕಿಂತ ಹೆಚ್ಚು ಸ್ಥಾವರಗಳಿದ್ದಲ್ಲಿ, ಒಂದು ಸ್ಥಾವರಕ್ಕೆ ಮಾತ್ರ ಈ ಯೋಜನೆಯಡಿಯ ಸೌಲಭ್ಯಕ್ಕೆ ಅರ್ಹರಾಗುವರು.

<table>
<tr>
<td></td>
<td></td>
<td>
<u>ಕೃಷಿ ಬಳಕೆದಾರರಿಗೆ ಈ ಕೆಳಕಂಡಂತೆ ಮಾನದಂಡಗಳು ಅನ್ವಯಿಸುತ್ತದೆ.</u><br>
ರೈತರ ಕೃಷಿ ಚಟುವಟಿಕೆಗೆ ಸಹಾಯವಾಗಲು ಹಾಗೂ ಅಂತರ್ಜಲ ಬಳಕೆಯನ್ನು ಉತ್ತೇಜಿಸಲು ಅನುವಾಗುವಂತೆ ರಾಜ್ಯ ಸರ್ಕಾರವು ರೈತರ ಕೃಷಿ ಪಂಪ್‌ಸೆಟ್ ಗಳಿಗೆ ಉಚಿತ ವಿದ್ಯುತ್ ನೀಡಲು ದಿನಾಂಕ:20.06.1992ರ ಪ್ರಕಾರ ಸರ್ಕಾರಿ ಅಧಿಸೂಚನೆ ಹೊರಡಿಸಿರುತ್ತದೆ.<br><br>
ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ ಇಎನ್ 55 ಪಿಎಸ್‌ಆರ್ 2008 ಬೆಂಗಳೂರು ದಿನಾಂಕ 04.09.2008 ರನ್ವಯ 10 ಹೆಚ್‌ಪಿ ವರೆಗಿನ (10 ಹೆಚ್‌ಪಿ ಸೇರಿದಂತೆ) ರೈತರ ನೀರಾವರಿ ಪಂಪ್ ಸೆಟ್‌ಗಳಿಗೆ ಈ ಕೆಳಗಿನ ಷರತ್ತಿಗೊಳಪಟ್ಟು ದಿನಾಂಕ 01.08.2008 ರಿಂದ ಮುಂದಿನ ಆದೇಶ ಹೊರಡಿಸುವ ವರೆಗೆ ಉಚಿತ ವಿದ್ಯುತ್ ನೀಡಲು ನಿರ್ಧರಿಸಿ ಕೆಳಕಂಡ ಮಾನದಂಡಗಳನ್ನು ನಿಗದಿಪಡಿಸಿರುತ್ತದೆ.<br><br>
1. ಒಂದು ವರ್ಷದ ಅವಧಿಯೊಳಗೆ ಮೀಟರ್‌ಗಳನ್ನು ಅಳವಡಿಸತಕ್ಕದ್ದು,<br>
2. ವಿದ್ಯುತ್ ಸರಬರಾಜು ಸಂಸ್ಥೆಗಳು ದಿನಾಂಕ 31.03.2009 ರೊಳಗೆ ರೇಟಿಂಗ್ ಮಾಡತಕ್ಕದ್ದು,<br>
3. ಎಲ್ಲಾ ನೀರಾವರಿ ಪಂಪ್ ಸೆಟ್‌ಗಳು ಅಂತರ್ ಜಲ ರೆಗ್ಯೂಲೇಷನ್‌ಗಳಲ್ಲಿ(ಕರ್ನಾಟಕ ಅಂತರಜಲ ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ ಅಧಿನಿಯಮ 1991) ವಿಧಿಸಲಾಗಿರುವ ಅಂತರವನ್ನು (Distance) ಮುಂದೆ ಕಡ್ಡಾಯವಾಗಿ ಪಾಲಿಸುವುದು.<br>
4. ಯಾವುದೇ ನೀರಾವರಿ ಪಂಪ್‌ಸೆಟ್‌ಗಳನ್ನು ಸಂಬಂಧಪಟ್ಟ ಪ್ರಾಧಿಕಾರದ ಅನುಮೋದನೆ ಇಲ್ಲದೆ ಅಳವಡಿಸುವಂತಿಲ್ಲ. ಒಂದು ವೇಳೆ ಹಾಗೆ ಮಾಡಿದಲ್ಲಿ ಅವರಿಗೆ ಉಚಿತ ವಿದ್ಯುತ್ತನ್ನು ನೀಡಲಾಗುವುದಿಲ್ಲ.<br>
5. ಮೀಟರ್ ಅಳವಡಿಕೆಯನ್ನು ತಡೆಯುವ ಯಾವುದೇ ರೈತ ಉಚಿತ ವಿದ್ಯುತ್ತನ್ನು ಪಡೆಯಲು ಅರ್ಹನಾಗಿರುವುದಿಲ್ಲ.<br>
6. ರೈತ ವಿದ್ಯುತ್ ಸರಬರಾಜು ಕಂಪನಿಗೆ ಪಾವತಿಸಬೇಕಾದ ಬಾಕಿ (ಅಸಲು) ನ್ನು ಎರಡು ವರ್ಷಗಳೊಳಗೆ ಎಂಟು ಕಂತುಗಳಲ್ಲಿ ಪಾವತಿಸತಕ್ಕದ್ದು,<br>
7. ವಿದ್ಯುತ್ ಬಾಕಿಯನ್ನು ಎರಡು ವರ್ಷಗಳೊಳಗೆ ಪಾವತಿಸಿದ ಹಾಗೂ ಮೀಟರ್‌ನ್ನು ಅಳವಡಿಸಿಕೊಳ್ಳಲಾದ ಎಲ್ಲಾ ರೈತರಿಗೆ ವಿದ್ಯುತ್ ಬಾಕಿ ಮೇಲಿನ ಬಡ್ಡಿಯನ್ನು ಮನ್ನಾ ಮಾಡಲಾಗುವುದು.<br>
8. ಎರಡು ವರ್ಷಗಳ ಅವಧಿಯೊಳಗೆ ವಿದ್ಯುತ್ ಬಾಕಿ ಪಾವತಿಸಿದ ರೈತರಿಗೆ ಬಡ್ಡಿ ಮನ್ನಾ ಮಾಡುವ ಪ್ರಸ್ತಾವನೆಯನ್ನು ಸಂಬಂಧಪಟ್ಟ ವಿದ್ಯುತ್ ಸರಬರಾಜು ಕಂಪನಿಗಳು ಕೆ.ಇ.ಆರ್.ಸಿ ಮುಂದೆ ಮಂಡಿಸುವುದು.
</td>
</tr>
<tr>
<td>ಈ)</td>
<td>ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಇಂಧನ ಇಲಾಖೆಯಿಂದ ಸಾರ್ವಜನಿಕರಿಗೆ ಎಷ್ಟು ಬಾರಿ ಯಾವ ಯಾವ ಉದ್ದೇಶಕ್ಕಾಗಿ ದರ ಪರಿಷ್ಕರಿಸಲಾಗಿದೆ; ದರ</td>
<td>
ಕೆ.ಇ.ಆರ್.ಸಿ. ರವರು ಕಳೆದ 3 (ಮೂರು) ವರ್ಷಗಳಲ್ಲಿ ಈ ಕೆಳಕಂಡ ದಿನಾಂಕಗಳಂದು ವಿದ್ಯುತ್ ದರವನ್ನು ಪರಿಷ್ಕರಿಸಿರುತ್ತಾರೆ.
<table>
<tr><th>ವರ್ಷ</th><th>ದಿನಾಂಕ</th></tr>
<tr><td>ಆರ್ಥಿಕ ವರ್ಷ 2021</td><td>04.11.2020</td></tr>
</table>
</td>
</tr>
</table>

<table>
<tr>
<td></td>
<td>ಪರಿಷ್ಕರಣೆಯಿಂದ ಇಂಧನ ಇಲಾಖೆಗೆ ಉಂಟಾಗಿರುವ ಲಾಭದ ಮೊಬಗಲು ಎಷ್ಟು; (ವಿವರ ನೀಡುವುದು)</td>
<td><table>
<tr><td>ಆರ್ಥಿಕ ವರ್ಷ 2022</td><td>09.06.2021</td></tr>
<tr><td>ಆರ್ಥಿಕ ವರ್ಷ 2023</td><td>04.04.2022</td></tr>
<tr><td>ಆರ್ಥಿಕ ವರ್ಷ 2024</td><td>12.05.2023</td></tr>
</table>
ವಿದ್ಯುತ್ ದರವನ್ನು ಹೆಚ್ಚಿಸಲು ಕಾರಣವಾಗುವ ಪ್ರಮುಖ ಅಂಶಗಳು ಈ ಕೆಳಕಂಡಂತಿವೆ:</td>
</tr>
<tr>
<td></td>
<td></td>
<td>1. ವಿದ್ಯುತ್ ಬೇಡಿಕೆಯನ್ನು ಪೂರೈಸಲು ಹೊಸ ಉತ್ಪಾದನಾಕೇಂದ್ರ ಹಾಗೂ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ತನ್ನು ಖರೀದಿಸ ಬೇಕಾಗಿರುವುದರಿಂದ ವಿದ್ಯುತ್ ಖರೀದಿಯ ವೆಚ್ಚವು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಆದುದರಿಂದ ಜಕಾತಿ ಹೆಚ್ಚಳವು ಅನಿವಾರ್ಯವಾಗಿದೆ.<br>
2. ವಿದ್ಯುತ್ ಖರೀದಿ ಒಪ್ಪಂದಗಳಂತೆ ವಿದ್ಯುತ್ ಸರಬರಾಜು ಕಂಪನಿಗಳು, ಉತ್ಪಾದನಾಕೇಂದ್ರಗಳಿಗೆ ಪ್ರತಿ ತಿಂಗಳು ನಿಗದಿತ ವೆಚ್ಚವನ್ನು ಭರಿಸಬೇಕಾಗುತ್ತದೆ.<br>
3. ಇದಲ್ಲದೆ, ನೌಕರರ ಸಂಬಳದ ಪರಿಷ್ಕರಣೆ, ಕಾರ್ಯ ಮತ್ತು ನಿರ್ವಹಣಾ ವೆಚ್ಚ, ಬಂಡವಾಳ ವೆಚ್ಚ ಮತ್ತು ಕಾರ್ಯನಿರತ ಬಂಡವಾಳಕ್ಕಾಗಿ ಸಾಲಗಳ ಮೇಲಿನ ಬಡ್ಡಿ ವೆಚ್ಚಗಳು ಜಕಾತಿ ಪರಿಷ್ಕರಣೆಯಲ್ಲಿ ಒಳಗೊಂಡಿರುತ್ತದೆ.<br>
4. ವಿದ್ಯುತ್ ಖರೀದಿ ವೆಚ್ಚ ಮತ್ತು ವಿದ್ಯುತ್ ಮಾರಾಟದಿಂದ ಬರುತ್ತಿರುವ ವ್ಯತ್ಯಾಸವು ಹೆಚ್ಚಾಗುತ್ತಿದ್ದು, ವಿದ್ಯುತ್ ದರ ಏರಿಕೆಯು ಅನಿವಾರ್ಯವಾಗಿರುತ್ತದೆ.<br><br>
ಕಂದಾಯ ಕೊರತೆ ಸರಿದೂಗಿಸಲು ವಿದ್ಯುತ್ ದರ ಏರಿಕೆ ಮಾಡುವುದರಿಂದ ಲಾಭದ ಪ್ರಶ್ನೆ ಉದ್ಭವಿಸುವುದಿಲ್ಲ.</td>
</tr>
<tr>
<td>ಉ)</td>
<td>ಈ ರೀತಿ ಅಸಮಂಜಸವಾಗಿ ಪದೇ ಪದೇ ಇಂಧನ ಇಲಾಖೆಯಿಂದ ವಿದ್ಯುತ್ ದರ ಪರಿಷ್ಕರಣೆ ಮಾಡಿ ಸಾರ್ವಜನಿಕರಿಗೆ ಆರ್ಥಿಕ ಹೊರೆ ಉಂಟು ಮಾಡುವುದನ್ನು ತಡೆಗಟ್ಟುವಲ್ಲಿ ಸರ್ಕಾರ ಕ್ರಮ ವಹಿಸುವುದೇ? (ವಿವರ ನೀಡುವುದು)</td>
<td>ದರ ನಿಗದಿ ಪಡಿಸುವ ಅಧಿಕಾರವು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ವ್ಯಾಪ್ತಿಗೆ ಒಳಪಟ್ಟಿರುತ್ತದೆ.<br>
ಪ್ರಸ್ತುತ ಚಾಲ್ತಿಯಲ್ಲಿರುವ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿಯಮಾವಳಿಗಳ ಪ್ರಕಾರ ವಿದ್ಯುತ್ ಕಾಯ್ದೆ 2003ರ ಸೆಕ್ಷನ್ (62) ರ ಅಡಿಯಲ್ಲಿ, ವಿದ್ಯುತ್ ಸರಬರಾಜು ಕಂಪನಿಗಳು ಪ್ರತಿ ವರ್ಷ ತಮ್ಮ ವೆಚ್ಚಗಳಲ್ಲಿ ಉಂಟಾಗುವ ಕೊರತೆಯ ಅನುಸಾರ ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುತ್ತಿದ್ದು, ದರ ಪರಿಷ್ಕರಣೆಯ ಸಾಧಕ ಬಾಧಕಗಳು ಅಗತ್ಯತೆಗಳ ಬಗ್ಗೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಸಾರ್ವಜನಿಕ ಅಹವಾಲು ಮತ್ತು ವಿಚಾರಣೆ ನಡೆಸಿದ ನಂತರ ದರ ಪರಿಷ್ಕರಣೆ ಆದೇಶ ಮಾಡಲಾಗುತ್ತದೆ.</td>
</tr>
</table>

ಸಂಖ್ಯೆ: ಎನರ್ಜಿ 274 ಇಬಿಎಸ್ 2023

(ಕೆ.ಜೆ.ಜಾರ್ಜ್) 6/12/23

ಇಂಧನ ಸಚಿವರು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸೂರಜ್ ರೇವಣ್ಣ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 74ಕ್ಕೆ ಅನುಬಂಧ-1

2022-23 ನೇ ವರ್ಷದಲ್ಲಿ ಹಾಗೂ 2023-24 (ಏಪ್ರಿಲ್-23 ರಿಂದ ಸೆಪ್ಟೆಂಬರ್-23ರ ಅಂತ್ಯದವರೆಗೆ) ಒಟ್ಟು ಉತ್ಪಾದನೆಯಾದ ಸರ್ಕಾರಿ ಮತ್ತು ಖಾಸಗಿ ವಿದ್ಯುತ್ ಪ್ರಮಾಣದ ವಿವರಗಳು ಈ ಕೆಳಕಂಡಂತಿದೆ:

| ಕ್ರಮ. ಸಂಖ್ಯೆ | ಜಿಲ್ಲೆ | ವಿದ್ಯುತ್ ಉತ್ಪಾದನಾ ಕೇಂದ್ರ | 2022-23 ವಿದ್ಯುತ್ ಪ್ರಮಾಣ (ಮಿ.ಯೂ) ಗಳಲ್ಲಿ (ತಾತ್ಕಾಲಿಕ) | 2023-24 (APRIL-23 TO SEP-23) ವಿದ್ಯುತ್ ಪ್ರಮಾಣ (ಮಿ.ಯೂ) ಗಳಲ್ಲಿ (ತಾತ್ಕಾಲಿಕ) |
|---|---|---|---|---|
| **ಸರ್ಕಾರಿ ಸ್ವಾಮ್ಯದ ವಿದ್ಯುತ್ ಘಟಕಗಳು:** | | | | |
| **ಶಾಖೋತ್ಪನ್ನ ಕೇಂದ್ರಗಳು** | | | | |
| 1 | ರಾಯಚೂರು | ರಾಯಚೂರು ಶಾಖೋತ್ಪನ್ನ ಕೆಂದ್ರ | 16772.20 | 9846.88 |
| 2 | | ಯರಮರಸ್ ಶಾಖೋತ್ಪನ್ನ ಕೆಂದ್ರ | | |
| 3 | ಬಳ್ಳಾರಿ | ಬಳ್ಳಾರಿ ಶಾಖೋತ್ಪನ್ನ ಕೆಂದ್ರ | | |
| **ಜಲ ವಿದ್ಯುತ್** | | | | |
| 4 | ಶಿವಮೊಗ್ಗ | ಶರಾವತಿ | 13228.95 | 5496.35 |
| 5 | | ವಾರಾಹಿ | | |
| 6 | | ಗೇರುಸೊಪ್ಪ | | |
| 7 | | ಎಂ.ಜಿ.ಹೆಚ್.ಇ. ಜೋಗ್ | | |
| 8 | | ಲಿಂಗನಮಕ್ಕಿ | | |
| 9 | | ಭದ್ರಾ | | |
| 10 | | ಮಾಣಿ | | |
| 11 | ಉತ್ತರ ಕನ್ನಡ | ನಾಗಝರಿ | | |
| 12 | | ಕೊಡಸಳ್ಳಿ | | |
| 13 | | ಕದ್ರಾ | | |
| 14 | | ಸೂಪಾ | | |
| 15 | ಮಂಡ್ಯ | ಶಿಂಷಾ | | |
| 16 | | ಶಿವನಸಮುದ್ರ | | |
| 17 | ಕೊಪ್ಪಳ | ಮುನಿರಾಬಾದ್ | | |
| 18 | ಬಾಗಲಕೋಟೆ | ಆಲಮಟ್ಟಿ | | |
| 19 | ಬೆಳಗಾವಿ | ಘಟಪ್ರಭ | | |
| 20 | ವಿಜಯನಗರ | ಟಿ.ಬಿ. ಡ್ಯಾಂಮ್ | | |
| **ಇತರೆ** | | | | |
| 21 | ಕೇಂದ್ರ ಸರ್ಕಾರ ಸ್ವಾಮ್ಯದ ವಿದ್ಯುತ್ ಉತ್ಪಾದನಾ ಘಟಕಗಳಿಂದ ರಾಜ್ಯದ ಪಾಲು | | 22798.33 | 14711.85 |
| **ಖಾಸಗಿ ಸ್ವಾಮ್ಯದ ವಿದ್ಯುತ್ ಘಟಕಗಳು** | | | | |
| 22 | ಉಡುಪಿ | ಯು.ಪಿ.ಸಿ.ಎಲ್ (ಬೃಹತ್ ಐಪಿಪಿ) | 1271.37 | 1753.77 |
| 23 | ಬಳ್ಳಾರಿ | ಜಿಂದಾಲ್ | 1116.01 | 933.72 |
| **ಖಾಸಗಿ/ ಸರ್ಕಾರಿ ಸ್ವಾಮ್ಯದ ವಿದ್ಯುತ್ ಘಟಕಗಳು** | | | | |
| 24 | ಸಾಂಪ್ರದಾಯಕ ಮೂಲಗಳಿಂದ + ಕ್ಯಾಪ್ಟಿವ್ | | 25325.30 | 14124.84 |
| ಒಟ್ಟು | | | **80512.16** | **46867.41** |

## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸೂರಜ್ ರೇವಣ್ಣ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 74ಕ್ಕೆ ಅನುಬಂಧ-2

### ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ :

ಸಾರ್ವಜನಿಕರಿಗೆ ಹಾಗೂ ಕೃಷಿಕರಿಗೆ ಉಚಿತ ವಿದ್ಯುತ್ ನೀಡುವ (ಮಾಸಿಕವಾಗಿ, ವಾರ್ಷಿಕವಾಗಿ ವ್ಯಯಿಸುವ) ಯುನಿಟ್‌ಗಳು ಹಾಗು ಸಂಖ್ಯಾವಾರು ವಿವರಗಳು ಈ ಕೆಳಕಂಡಂತಿರುತ್ತವೆ.

ಮಾಸಿಕ ಸರಾಸರಿ ವಿವರ :

| ಜಿಲ್ಲೆ | ಸಾರ್ವಜನಿಕರು (ಗೃಹ ಬಳಕೆ) | | | ಕೃಷಿಕರು | | |
|---|---|---|---|---|---|---|
| | ಗ್ರಾಹಕರ ಸಂಖ್ಯೆ | ಉಚಿತ ಯುನಿಟ್ (ಮಿ.ಯು) | ಮೊತ್ತ (ಕೋಟಿ) | ಗ್ರಾಹಕರ ಸಂಖ್ಯೆ | ಉಚಿತ ಯುನಿಟ್ (ಮಿ.ಯು) | ಮೊತ್ತ (ಕೋಟಿ) |
| ಮೈಸೂರು | 830204 | 36.45 | 35.24 | 135034 | 96.13 | 74.64 |
| ಮಂಡ್ಯ | 448051 | 17.86 | 15.61 | 120836 | 72.18 | 64.58 |
| ಚಾಮರಾಜನಗರ | 244045 | 7.58 | 7.19 | 71678 | 82.50 | 55.03 |
| ಕೊಡಗು | 137753 | 6.37 | 5.78 | 8935 | 16.60 | 9.61 |
| ಹಾಸನ | 483536 | 16.02 | 15.21 | 140509 | 77.59 | 68.78 |
| **ಒಟ್ಟು** | **2143589** | **84.23** | **79.03** | **476992** | **345.00** | **272.64** |

ವಾರ್ಷಿಕ ಸರಾಸರಿ ವಿವರ:

| ಜಿಲ್ಲೆ | ಸಾರ್ವಜನಿಕರು (ಗೃಹ ಬಳಕೆ) | | | ಕೃಷಿಕರು | | |
|---|---|---|---|---|---|---|
| | ಗ್ರಾಹಕರ ಸಂಖ್ಯೆ | ಉಚಿತ ಯುನಿಟ್ (ಮಿ.ಯು) | ಮೊತ್ತ (ಕೋಟಿ) | ಗ್ರಾಹಕರ ಸಂಖ್ಯೆ | ಉಚಿತ ಯುನಿಟ್ (ಮಿ.ಯು) | ಮೊತ್ತ (ಕೋಟಿ) |
| ಮೈಸೂರು | 830204 | 437.40 | 434.63 | 130372 | 1153.56 | 895.68 |
| ಮಂಡ್ಯ | 448051 | 214.32 | 199.07 | 117713 | 866.16 | 774.96 |
| ಚಾಮರಾಜನಗರ | 244045 | 90.96 | 98.03 | 70064 | 990.20 | 660.36 |
| ಕೊಡಗು | 137753 | 76.44 | 69.36 | 8245 | 199.20 | 115.32 |
| ಹಾಸನ | 483536 | 192.24 | 194.27 | 137197 | 931.08 | 825.36 |
| **ಒಟ್ಟು** | **2143589** | **1011.36** | **995.36** | **463591** | **4140.20** | **3271.68** |

### ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ:

#### ಮಾಸಿಕ ಸರಾಸರಿ ವಿವರ

| ಜಿಲ್ಲೆ | ಸಾರ್ವಜನಿಕರು (ಗೃಹ ಬಳಕೆ) | | | ಕೃಷಿಕರು | | |
|---|---|---|---|---|---|---|
| | ಗ್ರಾಹಕರ ಸಂಖ್ಯೆ | ಉಚಿತ ಯುನಿಟ್ (ಮಿ.ಯು) | ಮೊತ್ತ (ಕೋಟಿ) | ಗ್ರಾಹಕರ ಸಂಖ್ಯೆ | ಉಚಿತ ಯುನಿಟ್ (ಮಿ.ಯು) | ಮೊತ್ತ (ಕೋಟಿ) |
| ಬೆಂಗಳೂರು ಗ್ರಾಮಾಂತರ | 590683 | 38.30 | 28.53 | 73157 | 34.51 | 18.24 |
| ಬೆಂಗಳೂರು ನಗರ | 3034202 | 200.52 | 228.79 | 16541 | 18.64 | 11.28 |
| ಚಿಕ್ಕಬಳ್ಳಾಪುರ | 301053 | 13.18 | 11.89 | 93522 | 52.76 | 31.32 |
| ಚಿತ್ರದುರ್ಗ | 359824 | 15.44 | 13.80 | 150373 | 115.91 | 69.67 |
| ದಾವಣಗೆರೆ | 484636 | 22.95 | 20.33 | 165131 | 107.39 | 63.49 |
| ಕೋಲಾರ | 341201 | 15.81 | 13.97 | 103498 | 53.25 | 31.68 |
| ರಾಮನಗರ | 305326 | 13.65 | 11.72 | 84474 | 40.80 | 25.25 |
| ತುಮಕೂರು | 680937 | 26.40 | 24.05 | 293498 | 165.36 | 97.66 |
| **ಒಟ್ಟು** | **6097862** | **346.26** | **353.08** | **980194** | **588.62** | **348.59** |

### ವಾರ್ಷಿಕ ಸರಾಸರಿ ವಿವರ

| ಜಿಲ್ಲೆ | ಸಾರ್ವಜನಿಕರು (ಗೃಹ ಬಳಕೆ) | | | ಕೃಷಿಕರು | | |
|---|---|---|---|---|---|---|
| | ಗ್ರಾಹಕರ ಸಂಖ್ಯೆ | ಉಚಿತ ಯುನಿಟ್ (ಮಿ.ಯು) | ಮೊತ್ತ (ಕೋಟಿ) | ಗ್ರಾಹಕರ ಸಂಖ್ಯೆ | ಉಚಿತ ಯುನಿಟ್ (ಮಿ.ಯು) | ಮೊತ್ತ (ಕೋಟಿ) |
| ಬೆಂಗಳೂರು ಗ್ರಾಮಾಂತರ | 590683 | 106.93 | 342.40 | 73157 | 34.51 | 218.88 |
| ಬೆಂಗಳೂರು ನಗರ | 3034202 | 536.84 | 2745.45 | 16541 | 18.64 | 135.36 |
| ಚಿಕ್ಕಬಳ್ಳಾಪುರ | 301053 | 37.45 | 142.67 | 93522 | 52.76 | 375.84 |
| ಚಿತ್ರದುರ್ಗ | 359824 | 44.05 | 165.65 | 150373 | 115.91 | 836.04 |
| ದಾವಣಗೆರೆ | 484636 | 65.32 | 243.96 | 165131 | 107.39 | 761.88 |
| ಕೋಲಾರ | 341201 | 45.47 | 167.59 | 103498 | 53.25 | 380.16 |
| ರಾಮನಗರ | 305326 | 39.55 | 140.62 | 84474 | 40.80 | 303 |
| ತುಮಕೂರು | 680937 | 76.41 | 288.57 | 293498 | 165.36 | 1171.92 |
| **ಒಟ್ಟು** | **6097862** | **952.02** | **4236.91** | **980194** | **588.62** | **4183.08** |

## ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ:

### ಮಾಸಿಕ ಸರಾಸರಿ ವಿವರ.

| ಜಿಲ್ಲೆ | ಗೃಹ ಬಳಕೆ (ಬಿಜೆ/ಕೆಜೆ ಒಳಗೊಂಡು) | | | ಕೃಷಿಕರು (10 ಹೆಚ್.ಪಿ. ವರೆಗೆ) | | |
|---|---|---|---|---|---|---|
| | ಸ್ಥಾವರಗಳ ಸಂಖ್ಯೆ | ಯೂನಿಟ್ (ಮಿ.ಯೂ) | ಮೊತ್ತ (ಕೋಟಿ) | ಸ್ಥಾವರಗಳ ಸಂಖ್ಯೆ | ಯೂನಿಟ್ (ಮಿ.ಯೂ) | ಮೊತ್ತ (ಕೋಟಿ) |
| ಧಾರವಾಡ | 469925 | 18.65 | 24.70 | 39,073 | 15.02 | 13.56 |
| ಗದಗ | 255172 | 6.78 | 8.02 | 42,951 | 14.98 | 13.41 |
| ಹಾವೇರಿ | 372686 | 9.24 | 10.71 | 1,12,297 | 67.77 | 61.10 |
| ಉತ್ತರ ಕನ್ನಡ | 368142 | 15.23 | 18.08 | 87,299 | 18.35 | 16.47 |
| ಬೆಳಗಾವಿ | 932414 | 29.64 | 37.32 | 3,71,512 | 306.54 | 269.72 |
| ಬಾಗಲಕೋಟ | 386596 | 11.84 | 14.57 | 1,60,853 | 173.96 | 153.60 |
| ವಿಜಯಪುರ | 408508 | 13.56 | 16.92 | 2,19,763 | 145.98 | 129.42 |
| **ಒಟ್ಟು** | **3193443** | **104.96** | **130.37** | **10,33,748** | **742.60** | **657.28** |

### ವಾರ್ಷಿಕ ಸರಾಸರಿ ವಿವರ:

| ಜಿಲ್ಲೆ | ಗೃಹ ಬಳಕೆ (ಬಿಜೆ/ಕೆಜೆ ಒಳಗೊಂಡು) | | | ಕೃಷಿಕರು (10 ಹೆಚ್.ಪಿ. ವರೆಗೆ) | | |
|---|---|---|---|---|---|---|
| | ಸ್ಥಾವರಗಳ ಸಂಖ್ಯೆ | ಯೂನಿಟ್ (ಮಿ.ಯೂ) | ಮೊತ್ತ (ಕೋಟಿ) | ಸ್ಥಾವರಗಳ ಸಂಖ್ಯೆ | ಯೂನಿಟ್ (ಮಿ.ಯೂ) | ಮೊತ್ತ (ಕೋಟಿ) |
| ಧಾರವಾಡ | 469925 | 223.83 | 296.51 | 39,073 | 180.24 | 162.75 |
| ಗದಗ | 255172 | 81.36 | 96.32 | 42,951 | 179.78 | 160.88 |
| ಹಾವೇರಿ | 372686 | 110.92 | 128.62 | 1,12,297 | 813.27 | 733.15 |
| ಉತ್ತರ ಕನ್ನಡ | 368142 | 182.85 | 216.98 | 87,299 | 220.16 | 197.61 |
| ಬೆಳಗಾವಿ | 932414 | 355.74 | 447.93 | 3,71,512 | 3,678.51 | 3,236.66 |
| ಬಾಗಲಕೋಟ | 386596 | 142.09 | 174.96 | 1,60,853 | 2,087.48 | 1,843.18 |
| ವಿಜಯಪುರ | 408508 | 162.79 | 203.12 | 2,19,763 | 1,751.72 | 1,553.10 |
| **ಒಟ್ಟು** | **3193443** | **1259.60** | **1564.44** | **10,33,748** | **8,911.17** | **7,887.33** |

## ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ :

ಸಾರ್ವಜನಿಕರಿಗೆ ಹಾಗೂ ಕೃಷಿಕರಿಗೆ ಉಚಿತ ವಿದ್ಯುತ್ ನೀಡುವ (ಮಾಸಿಕವಾಗಿ, ವಾರ್ಷಿಕವಾಗಿ ವ್ಯಯಿಸುವ) ಯೂನಿಟ್‌ಗಳು ಹಾಗೂ ಸಂಖ್ಯಾವಾರು ವಿವರಗಳು ಈ ಕೆಳಕಂಡAತಿರುತ್ತವೆ.

## ಮಾಸಿಕ ಸರಾಸರಿ ವಿವರ :

| ಜಿಲ್ಲೆ | ಗೃಹ ಬಳಕೆ (ಬಿಜೆ/ಕೆಜೆ ಒಳಗೊಂಡು) | | | ಕೃಷಿಕರು (10 ಹೆಚ್.ಪಿ. ವರೆಗೆ) | | |
|---|---|---|---|---|---|---|
| | ಸ್ಥಾವರಗಳ ಸಂಖ್ಯೆ | ಯೂನಿಟ್ (ಮಿ.ಯೂ) | ಮೊತ್ತ (ಕೋಟಿ) | ಸ್ಥಾವರಗಳ ಸಂಖ್ಯೆ | ಯೂನಿಟ್ (ಮಿ.ಯೂ) | ಮೊತ್ತ (ಕೋಟಿ) |
| ಕಲಬುರಗಿ | 488696 | 22.12 | 21.73 | 88412 | 52.39 | 43.86 |
| ಯಾದಗಿರ | 175993 | 6.48 | 6.86 | 38857 | 33.15 | 28.08 |
| ಬೀದರ | 319780 | 13.61 | 13.94 | 86391 | 32.61 | 27.44 |
| ಬಳ್ಳಾರಿ | 236411 | 12.13 | 11.74 | 41673 | 27.00 | 22.40 |
| ವಿಜಯನಗರ | 232815 | 10.15 | 9.89 | 54975 | 57.89 | 48.98 |
| ರಾಯಚೂರ | 279279 | 12.21 | 12.37 | 60466 | 67.09 | 56.42 |
| ಕೊಪ್ಪಳ | 256305 | 10.12 | 10.04 | 66657 | 68.82 | 57.76 |
| **ಒಟ್ಟು** | **1989279** | **86.83** | **86.56** | **437431** | **338.96** | **284.94** |

## ವಾರ್ಷಿಕ ಸರಾಸರಿ ವಿವರ:

| ಜಿಲ್ಲೆ | ಗೃಹ ಬಳಕೆ (ಬಿಜೆ/ಕೆಜೆ ಒಳಗೊಂಡು) | | | ಕೃಷಿಕರು (10 ಹೆಚ್.ಪಿ. ವರೆಗೆ) | | |
|---|---|---|---|---|---|---|
| | ಸ್ಥಾವರಗಳ ಸಂಖ್ಯೆ | ಯೂನಿಟ್ (ಮಿ.ಯೂ) | ಮೊತ್ತ (ಕೋಟಿ) | ಸ್ಥಾವರಗಳ ಸಂಖ್ಯೆ | ಯೂನಿಟ್ (ಮಿ.ಯೂ) | ಮೊತ್ತ (ಕೋಟಿ) |
| ಕಲಬುರಗಿ | 488696 | 265.47 | 260.72 | 88412 | 628.72 | 526.36 |
| ಯಾದಗಿರ | 175993 | 77.78 | 82.33 | 38857 | 397.84 | 336.99 |
| ಬೀದರ | 319780 | 163.32 | 167.34 | 86391 | 391.32 | 329.25 |
| ಬಳ್ಳಾರಿ | 236411 | 145.56 | 140.91 | 41673 | 324.03 | 268.85 |
| ವಿಜಯನಗರ | 232815 | 121.79 | 118.63 | 54975 | 694.71 | 587.74 |
| ರಾಯಚೂರ | 279279 | 146.55 | 148.40 | 60466 | 805.04 | 677.01 |
| ಕೊಪ್ಪಳ | 256305 | 121.46 | 120.44 | 66657 | 825.89 | 693.11 |
| **ಒಟ್ಟು** | **1989279** | **1041.92** | **1038.78** | **437431** | **4067.53** | **3419.31** |

**ಮಂಗಳೂರು ವಿದ್ಯುತ್ ಸರಬರಾಜು ಕಂಪನಿ**

ಕೃಷಿ ಉದ್ದೇಶಕ್ಕೆ ನೀಡುವ ವಾರ್ಷಿಕ ಮತ್ತು ಮಾಸಿಕವಾಗಿ ನೀಡುವ ಸಹಾಯಧನದ ಮೊತ್ತ ಈ ಕೆಳಗಿನಂತಿದೆ.

(ಮೊತ್ತ ರೂ ಕೋಟಿಗಳಲ್ಲಿ)

| ಜಿಲ್ಲೆಯ ಹೆಸರು | ಗ್ರಾಹಕರ ಸಂಖ್ಯೆ | ವಾರ್ಷಿಕ ಬಳಕೆ ಮಿ.ಯೂನಿಟ್ ಗಳಲ್ಲಿ | ಮಾಸಿಕ ಬಳಕೆ ಮಿ.ಯೂನಿಟ್ ಗಳಲ್ಲಿ | ವಾರ್ಷಿಕ ಸಹಾಯ ಧನದ ಮೊತ್ತ | ಮಾಸಿಕ ಸಹಾಯ ಧನದ ಮೊತ್ತ |
|---|---|---|---|---|---|
| **ದಕ್ಷಿಣ ಕನ್ನಡ** | 129296 | 351.40 | 29.28 | 216.82 | 18.07 |
| **ಉಡುಪಿ** | 82376 | 113.82 | 9.48 | 70.55 | 5.88 |
| **ಶಿವಮೊಗ್ಗ** | 106804 | 767.64 | 63.97 | 475.20 | 39.60 |
| **ಚಿಕ್ಕಮಗಳೂರು** | 74048 | 410.20 | 34.18 | 253.27 | 21.11 |
| **ಒಟ್ಟು** | **392524** | **1643.06** | **136.92** | **1015.84** | **84.65** |

ಗೃಹ ಜ್ಯೋತಿ ಯೋಜನೆಯು ದಿನಾಂಕ 01.08.2023 ರಿಂದ ಅನ್ವಯವಾಗುವಂತೆ ಜಾರಿಗೆ ಬಂದಿದ್ದು, ಈ ಉದ್ದೇಶಕ್ಕೆ ಬಳಸಿದ ವಿದ್ಯುತ್ ಮತ್ತು ನೀಡಿರುವ ಸಹಾಯಧನದ ವಾರ್ಷಿಕ ಮತ್ತು ಮಾಸಿಕ ವಿವರಗ|ಳು ಕೆಳಗಿನಂತಿದೆ.

(ಮೊತ್ತ ರೂ ಕೋಟಿಗಳಲ್ಲಿ)

| ಜಿಲ್ಲೆಯ ಹೆಸರು | ಗ್ರಾಹಕರ ಸಂಖ್ಯೆ 31.10.2023 ರಂದು | ವಾರ್ಷಿಕ ಬಳಕೆ ಮಿ.ಯೂನಿಟ್ ಗಳಲ್ಲಿ | ಮಾಸಿಕ ಬಳಕೆ ಮಿ.ಯೂನಿಟ್ ಗಳಲ್ಲಿ | ವಾರ್ಷಿಕ ಸಹಾಯ ಧನದ ಮೊತ್ತ | ಮಾಸಿಕ ಸಹಾಯ ಧನದ ಮೊತ್ತ |
|---|---|---|---|---|---|
| **ದಕ್ಷಿಣ ಕನ್ನಡ** | 444344 | 393.65 | 32.80 | 395.38 | 32.95 |
| **ಉಡುಪಿ** | 271942 | 241.68 | 20.14 | 242.74 | 20.23 |
| **ಶಿವಮೊಗ್ಗ** | 474358 | 232.65 | 19.39 | 233.67 | 19.47 |
| **ಚಿಕ್ಕಮಗಳೂರು** | 287851 | 117.47 | 9.79 | 117.99 | 9.83 |
| ಒಟ್ಟು | **1478495** | **985.44** | **82.12** | **989.78** | **82.48** |

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸೂರಜ್ ರೇವಣ್ಣ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 74ಕ್ಕೆ ಅನುಬಂಧ-2**

## ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ :

ಸಾರ್ವಜನಿಕರಿಗೆ ಹಾಗೂ ಕೃಷಿಕರಿಗೆ ಉಚಿತ ವಿದ್ಯುತ್ ನೀಡುವ (ಮಾಸಿಕವಾಗಿ, ವಾರ್ಷಿಕವಾಗಿ ವ್ಯಯಿಸುವ) ಯುನಿಟ್‌ಗಳು ಹಾಗು ಸಂಖ್ಯಾವಾರು ವಿವರಗಳು ಈ ಕೆಳಕಂಡಂತಿರುತ್ತವೆ.

ಮಾಸಿಕ ಸರಾಸರಿ ವಿವರ :

| ಜಿಲ್ಲೆ | ಸಾರ್ವಜನಿಕರು (ಗೃಹ ಬಳಕೆ) | | | ಕೃಷಿಕರು | | |
|---|---|---|---|---|---|---|
| | ಗ್ರಾಹಕರ ಸಂಖ್ಯೆ | ಉಚಿತ ಯುನಿಟ್ (ಮಿ.ಯು) | ಮೊತ್ತ (ಕೋಟಿ) | ಗ್ರಾಹಕರ ಸಂಖ್ಯೆ | ಉಚಿತ ಯುನಿಟ್ (ಮಿ.ಯು) | ಮೊತ್ತ (ಕೋಟಿ) |
| ಮೈಸೂರು | 830204 | 36.45 | 35.24 | 135034 | 96.13 | 74.64 |
| ಮಂಡ್ಯ | 448051 | 17.86 | 15.61 | 120836 | 72.18 | 64.58 |
| ಚಾಮರಾಜನಗರ | 244045 | 7.58 | 7.19 | 71678 | 82.50 | 55.03 |
| ಕೊಡಗು | 137753 | 6.37 | 5.78 | 8935 | 16.60 | 9.61 |
| ಹಾಸನ | 483536 | 16.02 | 15.21 | 140509 | 77.59 | 68.78 |
| **ಒಟ್ಟು** | **2143589** | **84.28** | **79.03** | **476992** | **345.00** | **272.64** |

ವಾರ್ಷಿಕ ಸರಾಸರಿ ವಿವರ:

| ಜಿಲ್ಲೆ | ಸಾರ್ವಜನಿಕರು (ಗೃಹ ಬಳಕೆ) | | | ಕೃಷಿಕರು | | |
|---|---|---|---|---|---|---|
| | ಗ್ರಾಹಕರ ಸಂಖ್ಯೆ | ಉಚಿತ ಯುನಿಟ್ (ಮಿ.ಯು) | ಮೊತ್ತ (ಕೋಟಿ) | ಗ್ರಾಹಕರ ಸಂಖ್ಯೆ | ಉಚಿತ ಯುನಿಟ್ (ಮಿ.ಯು) | ಮೊತ್ತ (ಕೋಟಿ) |
| ಮೈಸೂರು | 830204 | 437.40 | 434.63 | 130372 | 1153.56 | 895.68 |
| ಮಂಡ್ಯ | 448051 | 214.32 | 199.07 | 117713 | 866.16 | 774.96 |
| ಚಾಮರಾಜನಗರ | 244045 | 90.96 | 98.03 | 70064 | 990.20 | 660.36 |
| ಕೊಡಗು | 137753 | 76.44 | 69.36 | 8245 | 199.20 | 115.32 |
| ಹಾಸನ | 483536 | 192.24 | 194.27 | 137197 | 931.08 | 825.36 |
| **ಒಟ್ಟು** | **2143589** | **1011.36** | **995.36** | **463591** | **4140.20** | **3271.68** |